‘ಕೇವಲ ಮೂಡುವುದಲ್ಲ, ಹೊಸ ಹೆಸರನ್ನು ಅವರು ಸೂಚಿಸಿ ಆದೇಶ ಹೊರಡಿಸಲೇಬೇಕು. ಇಲ್ಲದಿದ್ದರೆ ಪಡೆಯ ಸದಸ್ಯರನ್ನು ಮುಖ್ಯವಾಹಿನಿಗೆ ತರುವ ಔಚಿತ್ಯವೇನು?’ ಕೊಂಚ ಕಟುವಾಗಿಯೇ ನುಡಿದ ಅವಳ ಮಾತಿಗೆ ಅವಿರತ್ ಕಿರುನಗೆ ಬೀರಿದ.

‘ಕೆಲವು ವಿಚಾರಗಳಿಗೆ ನಾವು ಹೆಚ್ಚು ತಲೆಕೆಡಿಸಿಕೊಳ್ಳಬಾರದು ಹನ್ಸ್. ಕಾಮ್ ಡೌನ್, ಆಡಳಿತ ವರ್ಗಕ್ಕೆ ಅದರದ್ದೇ ಆದ ಮಿತಿಗಳುಂಟು.’

‘ಎಲ್ಲೆಡೆ ತರಬೇತಿ ಪ್ರಕ್ರಿಯೆ ಒಮ್ಮೆಲೇ ಜರುಗುತ್ತಿರುವುದರಿಂದ ಅದರ ಅಂಕಿ ಅಂಶಗಳ ಕಡೆ ನಾವು ಹಾಗೂ ಮಾಧ್ಯಮ ಗಮನ ಹರಿಸುತ್ತಿದೆಯೇ ಹೊರತು, ಈ ಸಣ್ಣ ಆದರೆ ಮುಖ್ಯ ವಿಷಯಗಳೆಡೆಯಲ್ಲ’.

‘ನಮ್ಮ ಗಮನಕ್ಕೆ ಬರದ ಹಲವಾರು ವಿಚಾರಗಳನ್ನು ಒಂದು ತಜ್ಞರ ಸಲಹಾ ತಂಡ ಆಡಳಿತ ವರ್ಗಕ್ಕೆ ಸಲಹೆ ಸೂಚನೆ ನೀಡಲಿದೆ. ನಾವು ಈ ವಿಚಾರವನ್ನೆಲ್ಲಾ ಅವರಿಗೆ ಬಿಟ್ಟರಾಯಿತು. ನಾವು ಏನಿದ್ದರೂ ನಮಗೆ ನೀಡಿದ ಕೆಲಸಗಳನ್ನು ಕಾರ್ಯಗತಗೊಳಿಸುವುದರೆಡೆ ಗಮನ ಹರಿಸಿದರಾಯಿತು.’ ಅವನ ಉತ್ತರ ಹಾರಿಕೆಯ ಪ್ರತಿಕ್ರಿಯೆಯಂತೆ ತೋರಿ ಅವಳಿಗೆ ಇರಿಸು ಮುರಿಸು ತರಿಸಿತ್ತು.

‘ಓ.ಕೆ. ಬೈ’ ಎಂದು ಸಂಪರ್ಕ ಕಡಿದಿದ್ದಳು.

ಅವಳು ಅಂದಿನ ಬೆಳವಣಿಗೆಯ ಬಳಿಕ ಡ್ರೈವಿಂಗ್ ಸ್ಕೂಲ್‌ನಲ್ಲಿ ಅಂಕಿಅಂಶಗಳನ್ನು ನಿಯಮಿತವಾಗಿ ಸಂಚಾರ ನಿಯಂತ್ರಣ ಕೇಂದ್ರಕ್ಕೆ ತಲುಪುವಂತೆ ನೋಡಿಕೊಂಡಳು. ವಿಸಿಟರ್ಸ್ ಗ್ಯಾಲರಿಯಲ್ಲಿನ ಹಿರಿದಾದ ವೀಡಿಯೋ ವಾಲ್‌ನಲ್ಲಿ ಕೆಲವೇ ನಿಮಿಷಗಳಲ್ಲಿ ಆ ಅಂಕಿಅಂಶಗಳ ಕ್ರೋಡೀಕರಣವಾಗುತ್ತಿದ್ದುದನ್ನು ನೋಡಿದಾಗ ಎಲ್ಲಾ ಡ್ರೈವಿಂಗ್ ಸ್ಕೂಲ್‌ಗಳಿಂದ ದೊರೆತ ಮಾಹಿತಿಯನ್ನು ಸಂಚಾರ ನಿಯಂತ್ರಣ ಕೇಂದ್ರದಿಂದ ಸಂಚಾರ ಪಿ.ಆರ್.ಓ. ವಿಭಾಗ ಮಾಧ್ಯಮಗಳಿಗೆ ಬಿಡುಗಡೆ ಮಾಡುತ್ತಿದೆ ಎಂಬುದು ಸ್ಪಷ್ಟವಾಗಿತ್ತು.

ನಿಗದಿತ ಅವಧಿಯ ತರಬೇತಿಯ ಬಳಿಕ ಪಡೆಯ ಸದಸ್ಯರು ಹೊಸಬರಿಗೆ ಅವಕಾಶ ಮಾಡಿಕೊಡುತ್ತಿದ್ದರಿಂದ ತರಬೇತಿಯ ಹಾಲ್‌ನಲ್ಲಿ ನಿರಂತರ ಚಟುವಟಿಕೆ ಕಂಡುಬರುತ್ತಿತ್ತು. ಅದಕ್ಕೆ ಪೂರಕವಾಗಿ ತರಬೇತುದಾರರು ಹಾಗೂ ಮನಃಶಾಸ್ತ್ರಜ್ಞರೂ ಪಾಳಿಯಂತೆ ಕರ್ತವ್ಯ ನಿರ್ವಹಿಸುತ್ತಿದ್ದರು.

ಅವರು ನಿಗದಿತ ಸಮಯಕ್ಕೆ ವರದಿ ಮಾಡಿಕೊಂಡು ಕರ್ತವ್ಯ ನಿರ್ವಹಿಸುವುದನ್ನು ಖಾತರಿಪಡಿಸಿಕೊಳ್ಳುವುದರ ಜೊತೆಗೆ ಅಲ್ಲಿನ ಕೆಲಸಗಳು ಸುಗಮವಾಗಿ ಸಾಗುವಂತೆ ನೋಡಿಕೊಳ್ಳುವ ಜವಾಬ್ದಾರಿಯೂ ಹನ್ಸಾಳ ಹೆಗಲ ಮೇಲಿತ್ತು. ದಿನಕಳೆದಂತೆ ಈ ಪ್ರಕ್ರಿಯೆಯೂ ಏಕತಾನತೆಯಿಂದ ಕೂಡಿದಂತೆ ತೋರಿ ತನ್ನ ಅಂದಿನ ಕೆಲಸ ಮುಗಿಯಲೆಂದು ನಿರೀಕ್ಷಿಸುವವಳಿಗೆ ಇದಕ್ಕಿದ್ದಂತೆ ನಿರೀಕ್ಷಣಾ ಕೊಠಡಿಯಲ್ಲಿ ತಮ್ಮ ಸರದಿಗೆ ಕಾಯುತ್ತಾ ಕುಳಿತಿದ್ದ ಪಡೆಯ ಸದಸ್ಯರಲ್ಲಿ ಹೊಸ ಚೈತನ್ಯ ತುಂಬಿದಂತೆ ಒಬ್ಬರಿನ್ನೊಬ್ಬರ ಕೈ ಕುಲುಕುತ್ತಾ ಅಪ್ಪುಗೆಯಲ್ಲಿ ನಿರತರಾಗಿದ್ದನ್ನು ನೋಡಿ ಚಕಿತಳಾದಳು.

‘ಯಾಕೆ? ಏನಾಯ್ತು?’ ಕುತೂಹಲದಿಂದ ಕೇಳಿದಾಗ ಅವರಲ್ಲೊಬ್ಬರು ವಿಡಿಯೊ ವಾಲ್‌ನತ್ತ ಕೈತೋರಿಸುತ್ತಾ ಆಗಷ್ಟೇ ಪ್ರಕಟವಾದ ಪೋಲ್‌ನ ಫಲಿತಾಂಶದೆಡೆ ಅವಳ ಗಮನ ಸೆಳೆದ. ಅವಳಿಗೆ ಕೂಡಲೇ ಅವರ ಸಂಭ್ರಮಕ್ಕೆ ಕಾರಣ ಹೊಳೆದಿತ್ತು.

‘ಅಂತೂ ಜನರ ಅಭಿಮತ ನಿಮ್ಮ ಕಡೆಗಾಯಿತು. ಇನ್ನು ನಿಮ್ಮನ್ನು ತಡೆಯುವವರಾರು?’

ಹಿಂದಿನ ದಿನದ ಆತಂಕವೆಲ್ಲವೂ ಕನಸಿನಂತೆ ತೋರಿತ್ತವರಿಗೆ. ಕೆಲ ಹೊತ್ತಿಗೆ ರೇವಾನ ಆಕೃತಿ ವಿಡಿಯೊ ವಾಲ್ ಪರದೆಯ ಮೇಲೆ ಮೂಡಿ ಬಂದು ತಮ್ಮ ಪಡೆಯ ಸದಸ್ಯರಿಗೆ ಸಂದ ವಿಜಯವೆಂದು ಬಿಂಬಿಸುವಂತೆ ಆತ ಹೇಳಿಕೆ ನೀಡಿದ್ದು ಪ್ರಸಾರವಾಗಿತ್ತು.

ಈ ವಿಷಯದಲ್ಲಾದರೂ ಸ್ಪಷ್ಟ ಬಹುಮತ ದೊರೆತಿದ್ದು ಅವರ ಕೆಲಸವನ್ನು ಸಲೀಸು ಮಾಡಿತ್ತು. ಇಲ್ಲದಿದ್ದರೆ ತಾವೆಲ್ಲಿ ಮತ್ತೆ ಹೋರಾಡಿ ರಕ್ತಸಿಕ್ತ ಚರಿತ್ರೆ ಬರೆಯಬೇಕಾದೀತೋ ಎಂಬ ಆತಂಕ ಇದ್ದಿದ್ದೇ. ಹನ್ಸಾ ಈ ಸಂಭ್ರಮಕ್ಕೂ ಮುಂಚೆ ಪಡೆಯ ಕೆಲ ಸದಸ್ಯರು ಮಾಧ್ಯಮಗಳಿಗೆ ಹೇಳಿಕೆ ನೀಡುವುದನ್ನು ನೋಡಿದ್ದಳು. ತಮ್ಮ ಸಂಕಷ್ಟಗಳ ಕುರಿತು ವೀಕ್ಷಕರ ಮನದಲ್ಲಿ ಮುಂಚಿತವಾಗಿಯೇ ಸಹಾನುಭೂತಿ ಉಕ್ಕಿಸುವುದಕ್ಕೆ ಪೂರಕವಾಗಿ ಆ ಹೇಳಿಕೆಗಳು ಕೆಲಸ ಮಾಡಿದ್ದವು.

ಅವರ ಉತ್ಸಾಹವನ್ನು ಕಂಡ ಮನಃಶಾಸ್ತ್ರಜ್ಞರು ತಮ್ಮ ಕಾರ್ಯ ವೀಕ್ಷಿಸಲು ಬಂದ ಹನ್ಸಾಳನ್ನು ಬದಿಗೆ ಕರೆದು ಹೇಳಿದ್ದರು.

‘ಪೋಲ್ ಫಲಿತಾಂಶ ಯಾವ ಮಟ್ಟಿಗೆ ಅವರ ಮನಃಸ್ಥಿತಿಯ ಮೇಲೆ ಪ್ರಭಾವ ಬೀರಿದೆ ಎಂದರೆ ನಾವು ಅವರನ್ನು ಪ್ರಾಯೋಗಿಕ ಪರೀಕ್ಷೆಯ ಬಳಿಕ ಒಬ್ಬೊಬ್ಬರ ಸಾಮರ್ಥ್ಯಕ್ಕನುಗುಣವಾಗಿ ನೀಡುತ್ತಿದ್ದ ತರಬೇತಿ ಅವಧಿ ಸಹ ಕಡಿಮೆ ಮಾಡುವಂತಾಗಿದೆ!’

‘ಅವರ ಉತ್ಸಾಹವನ್ನು ಮೆಚ್ಚಲೇಬೇಕು. ತಾವು ಹಿಂದಿನಂತೆ ಜೀವನ ನಡೆಸಬಹುದೆಂಬ ಖುಷಿ ನೋಡಿದಾಗ ಇದು ನಾವು ಸಂಚಾರ ಕೆಲಸವಲ್ಲದಿದ್ದರೂ ಅಪಘಾತದ ನಂತರದ ಪುನರ್ ವ್ಯವಸ್ಥೆಯ ಪರಿಕಲ್ಪನೆ ನಾವು ಸಮಾಜಕ್ಕೆ ಏನೋ ಕೊಡುಗೆ ನೀಡಿದಂತಹ ಧನ್ಯತಾ ಭಾವ ಮೂಡಿಸುತ್ತಿದೆ.’

‘ಹಾಗಾದರೆ ಈ ಖುಷಿಯೆನ್ನುವುದು ಒಂದು ಸನ್ನಿಯಂತೆ ಕೆಲಸ ಮಾಡುತ್ತಿದೆ. ಎಲ್ಲಿಂದೆಲ್ಲಿಗೆ ಅದು ವಲಸೆ ಬಂದಿದೆ!’ ಮನಃಶಾಸ್ತ್ರಜ್ಞರು ನಿಜವಾಗಿ ತಮ್ಮ ಆಶ್ಚರ್ಯ ವ್ಯಕ್ತಪಡಿಸುತ್ತಿದ್ದಾರೋ ಇಲ್ಲವೋ ತಿಳಿಯದಾದಳು.

‘ಆ ವಿಷಯ ಇರಲಿ ಡಾಕ್ಟರ್. ನಾವು ದಿನವಹಿ ಪಡೆಯ ಸದಸ್ಯರೆಷ್ಟು ಮಂದಿ ತಮ್ಮ ತರಬೇತಿಗೆ ಸರಿಯಾಗಿ ಸ್ಪಂದಿಸಿದ್ದಾರೆಂಬ ವಿವರಗಳನ್ನು ನೀಡಬೇಕಿದೆ. ಈಗಿನ ಸುದ್ದಿ ಪ್ರಸಾರವಾಗಿರುವುದನ್ನು ನೋಡಿದರೆ ಮತ್ತಷ್ಟು ಮಂದಿ ತರಬೇತಿಗೆ ಬರುವ ಸಾಧ್ಯತೆಯಿದೆ ಎಂದು ನನ್ನ ಊಹೆಯಾಗಿದೆ.’

‘ನಿಮ್ಮ ಊಹೆ ನಿಜ ಹನ್ಸಾರವರೇ. ಇಲ್ಲಿನ ಪಡೆಯ ಸದಸ್ಯರು ಇದೇ ವಿಚಾರ ಮಾತನಾಡಿಕೊಳ್ಳುವುದು ನನ್ನ ಕಿವಿಗೆ ಬಿತ್ತು. ಸುದ್ದಿ ಮಾಧ್ಯಮಕ್ಕಿಂತ ಮಾತಿನ ಮೂಲಕ ಹರಡುವ ಸುದ್ದಿಗಳಿಗೆ ರೆಕ್ಕೆಗಳಿರುತ್ತವೆ. ಒಬ್ಬೊಬ್ಬರೂ ಹತ್ತಿಪ್ಪತ್ತು ಮಂದಿಯನ್ನು ತರಬೇತಿಗೆ ಸೆಳೆಯುವ ಸಾಮರ್ಥ್ಯ ಹೊಂದಿದ್ದಾರೆ.’

‘ಡಾಕ್ಟರ್, ಪ್ರತಿಭಟನೆಗೆ ಇಳಿದಾಗ ಅವರನ್ನು ಒಂದು ನಿರ್ದಿಷ್ಟ ಉದ್ದೇಶವಿಟ್ಟುಕೊಂಡಿರುವ ಒಂದು ಗುಂಪಾಗಿ ನೋಡುತ್ತೇವೆಯೇ ಹೊರತು ವ್ಯಕ್ತಿ ವ್ಯಕ್ತಿಯ ಪ್ರತ್ಯೇಕ ಧೋರಣೆಗಳನ್ನಲ್ಲ. ಆದರೆ ಈಗವರನ್ನು ಹತ್ತಿರದಿಂದ ನೋಡಿದಾಗ ಒಬ್ಬೊಬ್ಬರಿಗೂ ಒಂದೊಂದು ಸಮಸ್ಯೆ ಇದ್ದು, ಅವರಿಗೂ ಒಂದು ವ್ಯಕ್ತಿತ್ವವಿದೆ ಎಂದು ಅನಿಸುತ್ತಿದೆ.

ಅದೂ ನಿಜವೇ. ಅವರಿಗೆ ನೀಡಬೇಕಿರುವ ತರಬೇತಿಯ ಅವಧಿಯೂ ಅವರ ಸಾಮರ್ಥ್ಯಕ್ಕನುಗುಣವಾಗಿ ಬೇರೆ ಬೇರೆಯಾಗಿದೆ’, ಮನಃಶಾಸ್ತ್ರಜ್ಞರ ಮಾತಿಗೆ ಹನ್ಸಾ ಸಹಮತ ಸೂಚಿಸಿದಳು.

‘ಅವರಿಗೆ ಅರೆಮಾನವ ಪಡೆ ಎಂಬ ಹೆಸರಿನ ಬದಲಾಗಿ ಬೇರೆ ಯಾವ ಅನ್ವರ್ಥನಾಮ ಹೊಂದಬಹುದು ಡಾಕ್ಟರ್?’ ಇದೇ ಸರಿಯಾದ ಸಮಯವೆಂದು ಅವರಲ್ಲಿ ತನ್ನ ಅಭಿಪ್ರಾಯವನ್ನು ಹೇಳಿಕೊಂಡಳು.

‘ಅವರ ದೇಹದ ಮೇಲೆ ಆದ ಅಪಘಾತದ ಊನದಿಂದಾಗಿ ಅರೆಮಾನವ ಪಡೆ ಎಂಬ ಹೆಸರು ಬಂದಿತ್ತು. ಈಗ ಸಮಾಜದ ಮುಖ್ಯವಾಹಿನಿಗೆ ಬಂದು ಜೀವನ ನಡೆಸಲು ಅವಕಾಶ ಕಲ್ಪಿಸಿರುವುದರಿಂದ ಅವರನ್ನು ಯಾವ ಹೆಸರಿಂದ ಕರೆಯಬೇಕೆಂಬ ವಿಚಾರವನ್ನು ಅವರ ನಿರ್ಧಾರಕ್ಕೆ ಬಿಟ್ಟರೆ ಉತ್ತಮವೇನೋ?’

‘ಈ ವಿಚಾರ ಬಹಳಷ್ಟು ಚರ್ಚೆಗೆ ಎಡೆ ಮಾಡಿಕೊಡಬಹುದೆಂಬ ಭಯ ಇದೆ.’

‘ಆದರೆ ಈ ವಿಚಾರದಲ್ಲಿ ಚರ್ಚೆ ಇಲ್ಲದೆ ಏಕಪಕ್ಷೀಯವಾಗಿ ನಿರ್ಧಾರ ತೆಗೆದುಕೊಳ್ಳಲಾಗದಷ್ಟೇ?’

‘ಏನೋ ಡಾಕ್ಟರ್. ಒಂದು ವಿಷಯಕ್ಕೆ ಪರಿಹಾರ ದೊರಕಿಸಬೇಕೆಂಬ ಇಚ್ಛೆಯ ಜೊತೆಗೇ ಸಮಸ್ಯೆಯ ಉಪಾಂಗಗಳಿಗೂ ಪರಿಹಾರ ಕಾಣಿಸುವುದು ಅವಶ್ಯಕವಾಗಿ ತೋರ್‍ತಿದೆ.’

‘ನಾಮಕರಣದ ವಿಚಾರ ಆಡಳಿತ ವರ್ಗಕ್ಕೆ ಬಿಡಿ. ನೀವು ಕೇಳಿದ ಅಂಕಿಅಂಶಗಳು, ಅಂದರೆ ಎಷ್ಟು ಮಂದಿ ತರಬೇತಿಗೆ ಸರಿಯಾಗಿ ಸ್ಪಂದಿಸಿದ್ದಾರೆಂಬ ವಿವರಗಳು ದಿನದ ಕೊನೆಯಲ್ಲಿ ನೀಡಿದರಾಯಿತೇ?’

‘ಓ... ಶ್ಯೂರ್ ಡಾಕ್ಟರ್’ ಹನ್ಸಾಳಿಗೆ ಉತ್ತರ ನೀಡಿದ ಮನಃಶಾಸ್ತ್ರಜ್ಞರು ರಿಸೆಪ್ಷನ್‌ನಿಂದ ತಮ್ಮ ತರಬೇತಿ ಹಾಲ್ ಕಡೆ ನಡೆದರು.

ಹನ್ಸಾ ನೋಂದಣಿಗಾಗಿ ಕಾಯುತ್ತಿದ್ದ ಪಡೆಯ ಸದಸ್ಯರನ್ನು ಒಬ್ಬೊಬ್ಬರಾಗಿ ಪರಿಶೀಲನೆ ಮಾಡಿ ಒಳಗೆ ಕಳುಹಿಸುವಾಗ ವಿಡಿಯೊ ವಾಲ್‌ನಲ್ಲಿ ಪಡೆಯ ಸದಸ್ಯರನ್ನು ಯಾವ ಯಾವ ಕೆಲಸಗಳಿಗೆ ನಿಯೋಜಿಸಲಾಗುತ್ತದೆ ಎಂಬ ಪಟ್ಟಿಯೊಂದಿಗೆ ಅಂತಹ ಕಾರ್ಯಗಳನ್ನು ಅವರು ನಿಭಾಯಿಸುವಲ್ಲಿ ಇರುವ ಸಕಾರಾತ್ಮಕ ಹಾಗೂ ನಕಾರಾತ್ಮಕ ಪಟ್ಟಿ ಸಹ ಗ್ರಾಫಿಕಲ್ ಚಿತ್ರಣದ ತಂತ್ರಾಂಶದೊಂದಿಗೆ ವಿವರಗಳು ಮೂಡಿ ಬರುತ್ತಿದ್ದವು. ಜನ ಇಂತಹ